## ನಾಮಕರಣ

ಅಂದು ಪರಿಯ ಮಗಳು ಪುಟ್ಟಿ ತನ್ನ ಅಮ್ಮನ ಗೆಳತಿ ಕಮಲಳ ಮನೆಗೆ ಹೋದಾಗ, ಕಮಲ ತನ್ನ ಮಹಡಿ ಬಾಲ್ಕನಿಯಲ್ಲಿ, ಸ್ವಲ್ಪ ದೊಡ್ಡ ಕುಂಡದಲ್ಲಿ ಬೆಳೆಸಿದ್ದ ತಾವರೆ ಹೂಗಳನ್ನು ನೋಡಿ, 'ಇದು ಕೆಸರಿನಲ್ಲಿ ಬೆಳೆಯುವ ಹೂವು ಲೋಟಸ್ ಅಲ್ವಾ ಆಂಟಿ?' ಎಂದಳು. ಕಮಲ, 'ಹೌದು, ಪುಟ್ಟ, ಇದನ್ನ ಮಣ್ಣಿನಲ್ಲೂ ಬೆಳೆಸಬಹುದು, ಸೂರ್ಯನ ಬೆಳಕು ಬೇಕು. ಹೀಗಾಗಿ ಪಾಟ್‌ನಲ್ಲಿ ಬೆಳೆಸಿದ್ದೇವೆ' ಎಂದರು. 'ಹಾಗಾದ್ರೇ ಇದಕ್ಕೆ ಒಂದು ಹೆಸರಿಡಬೇಕಲ್ವಾ ಆಂಟಿ?' ಅಂದ್ಲು ಪುಟ್ಟಿ. 'ಹ್ಞೂ... ಹೌದು, ನೀನೇ ಏನಾದ್ರೂ ನಾಮಕರಣ ಮಾಡಮ್ಮಾ' ಅಂತ ಅನ್ನುವಷ್ಟರಲ್ಲೇ 'ಆಂಟಿ, ಇದನ್ನು ನೀವು ಪಾಟ್‌ನಲ್ಲಿ ಬೆಳಸಿದ್ದೀರಾ... ಅದಕ್ಕೇ ಇದ್ರ ಹೆಸರು ಪ್ಲೋಟಸ್. ಪಾಟ್+ಲೋಟಸ್=ಪ್ಲೋಟಸ್...' ಅಂದಾಗ ಎಲ್ಲರಿಗೂ ಇದೊಂಥರ ಹೆಸರು ಚೆನ್ನಾಗಿದೆ ಅನ್ನಿಸ್ತು.

**ಸುಮನಾ**



## ಶಿಶುವಿಹಾರ

ಅಂದು ನನ್ನ ತಂಗಿಯ ಮಗನ ಹುಟ್ಟುಹಬ್ಬ. ಮಕ್ಕಳೆಲ್ಲ ಸೇರಿ ಕೇಕ್ ತಂದು ಆಚರಿಸುತ್ತಿದ್ದರು. ನಮ್ಮ ಕುಟುಂಬದವರೆಲ್ಲರೂ ಸೇರಿದ್ದೆವು. ಎಲ್ಲರಿಗೂ ಕೇಕ್ ಹಂಚುವಾಗ ನಮ್ಮ ಮತ್ತೊಬ್ಬ ಸಹೋದರಿ 'ನನಗೆ ಕೇಕ್ ಬೇಡ ನಾನು ತಿನ್ನುವುದಿಲ್ಲ' ಎಂದಳು. ಕೂಡಲೇ ಅಲ್ಲಿಯೇ ಇದ್ದ ಬರ್ತ್ ಡೇ ಹುಡುಗನ ಅಜ್ಜಿ (ನನ್ನ ತಂಗಿಯ ಅತ್ತೆ) 'ಯಾಕೆ ತಿನ್ನಲ್ಲಾ? ನೀನು ಮೊದಲೆಲ್ಲಾ ಕೇಕ್ ತಿನ್ನುತ್ತಿದ್ದೆ ಅಲ್ವಾ?' ಎಂದರು. ಅವಳು 'ಇವತ್ತು ಸೋಮವಾರ. ಕೇಕಿಗೆ ಮೊಟ್ಟೆ ಹಾಕಿರ್ತಾರೆ ಅದಕ್ಕೆ...' ಎಂದಳು. ಕೂಡಲೇ ಅವರು 'ಅಯ್ಯೋ ತಿನ್ನವ್ವಾ ಏನೂ ಆಗಲ್ಲಾ ಮೊಟ್ಟೆ ಶಿಶುವಿಹಾರ' ಎಂದಾಗ ತಕ್ಷಣಕ್ಕೆ ಯಾರಿಗೂ ಅರ್ಥವಾಗದೆ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ನಂತರ ನಾನೇ, 'ಅಮ್ಮಾ ಏನಂದ್ರಿ?' ಎಂದಾಗ. 'ಮೊಟ್ಟೆ ಶಿಶುವಿಹಾರ ಕಣವ್ವಾ, ನಮ್ಮೂರಿಗೆ ಬರೋ ಡಾಕ್ಟ್ರೇ ಹೇಳಿದ್ರು' ಎಂದಾಗ ಮೊಟ್ಟೆ 'ಸಸ್ಯಹಾರ' ಎಂಬ ಪದ ಅವರ ಬಾಯಲ್ಲಿ ಶಿಶುವಿಹಾರವಾಗಿದೆ ಎಂದು ಅರ್ಥವಾದೊಡನೆ ಎಲ್ಲರೂ ತಬ್ಬಿಬ್ಬು.



ಚಿತ್ರ: ಗಣೇಶ ಆಚಾರ್ಯ

**ರಾಜೇಶ್ವರಿ ಹುಲ್ಲೇನಹಳ್ಳಿ**